ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/130/ಚುಪ್ರ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 13.02.2019

**ಸುತ್ತೋಲೆ**

ವಿಷಯ: ಯುವ ಮತದಾರರ ನೊಂದಣಿ ಅಭಿಯಾನ ಕುರಿತು

ಉಲ್ಲೇಖ: 1. ಸಂಖ್ಯೆ: ಡಿಪಿಎಆರ್/70/ಸುಂಪ/ಹೆಚ್ಚುವರಿ.ಸಿಇಒ-1 2018 ದಿನಾಂಕ: 20.08.2018
2. ದಿನಾಂಕ: 05.02.2019ರ ಈ ಕಛೇರಿ ಸಮ ಸಂಖ್ಯೆ ಪತ್ರ.

**********

ಮುಂಬರುವ ಸಾರ್ವತ್ರಿಕ ಲೋಕಸಭಾ-2019 ಚುನಾವಣೆಗೆ ಸಂಬಂಧಿಸಿದಂತೆ ಇದುವರೆವಿಗೂ ಮತದಾರರ ಪಟ್ಟಿಗೆ ಸೇರ್ಪಡೆಯಾಗದ ಅರ್ಹ ಯುವ ವಿದ್ಯಾರ್ಥಿ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವ ವಿಷಯವನ್ನು ಕಾಲೇಜು ಶಿಕ್ಷಣ ಇಲಾಖೆಯು ಗಂಭೀರವಾಗಿ ಪರಿಗಣಿಸಿದ್ದು, ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಅರ್ಹ ಯುವ ವಿದ್ಯಾರ್ಥಿ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವುದು ಕಡ್ಡಾಯವಾಗಿರುತ್ತದೆ.

ಈ ಸಂಬಂಧ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಕಾಲೇಜು ವ್ಯಾಪ್ತಿಯ ಸ್ಥಳೀಯ BLO (Booth level Officer) ಗಳೊಂದಿಗೆ ಸಮನ್ವಯ ಸಾಧಿಸಿ (ಸಂಪರ್ಕಿಸಿ) ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಭರ್ತಿ ಮಾಡಿಸಿ BLO ಗಳಿಗೆ ಮರು ಒಪ್ಪಿಸಲು ಈಗಾಗಲೇ ಸೂಚಿಸಲಾಗಿದೆ.

ಸದರಿ ನೋಂದಾವಣೆಯ ಪ್ರಕ್ರಿಯೆಯ ಮುಂದುವರೆದ ಭಾಗವಾಗಿ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ **ಯುವ ಮತದಾರರ ನೊಂದಣಿ ಅಭಿಯಾನ** ದಿನವನ್ನು ಕಾಲೇಜಿನ ಚುನಾವಣಾ ಸಾಕ್ಷರತಾ ಕ್ಲಬ್(ಇ.ಎಲ್.ಸಿ.), ಎನ್.ಎಸ್.ಎಸ್., ಎನ್.ಸಿ.ಸಿ. ಹಾಗೂ ರೋವರ್ಸ್/ರೇಂಜರ್ಸ್ ಘಟಕಗಳ ನೇತೃತ್ವದಲ್ಲಿ ದಿನಾಂಕ: 18.02.2019ರೊಳಗಾಗಿ ಹೆಚ್ಚಿನ ವಿದ್ಯಾರ್ಥಿಗಳ ಸಮ್ಮುದಲ್ಲಿ ಸ್ಥಳೀಯ ಜಿಲ್ಲಾಧಿಕಾರಿಗಳು/ತಹಶೀಲ್ದಾರ್ ಕಛೇರಿಯ ಪ್ರತಿನಿಧಿಗಳ ಮೇಲುಸ್ತುವಾರಿಯಲ್ಲಿ ನಡೆಸಿ, ಕಾಲೇಜು ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ತಿಳಿಸಿರುವ ಗೂಗಲ್ ಫಾರ್ಮ್ ಮೂಲಕ ದಿನಾಂಕ: 18.02.2019 ರೊಳಗಾಗಿ ಮಾಹಿತಿ ನೀಡಲು ಸೂಚಿಸಲಾಗಿದೆ.

ಮುಂದುವರೆದು ಸದರಿ ಮಾಹಿತಿಯ Weekly Progress ಅನ್ನು ಪ್ರತಿ ಶನಿವಾರ ಸಂಜೆ 05.00 ಗಂಟೆಯೊಳಗಾಗಿ ಅದೇ ಗೂಗಲ್ ಫಾರ್ಮ್ ಮೂಲಕ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ,

ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಿಗೆ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
ಕಾನೂನು, ಬಿ.ಎಡ್. ಮತ್ತು ಚಿತ್ರಕಲಾ ಕಾಲೇಜುಗಳು ಸೇರಿದಂತೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಗುಲ್ಬರ್ಗಾ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಜಿಲ್ಲೆಗಳ ಲೀಡ್ ಕಾಲೇಜಿನ ಪ್ರಾಂಶುಪಾಲರುಗಳಿಗೆ – ಜಿಲ್ಲಾವಾರು ಕ್ರೂಢೀಕೃತ ವರದಿಯನ್ನು ಸಲ್ಲಿಸಲು
3. ಕಛೇರಿ ಪ್ರತಿ

SVEEP

Scanned by CamScanner

# ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

ಸಂಖ್ಯೆ: ಸಿಆಸುಇ/2477/ಚುಮಪ/ಅಮುಚುಅ-1/2018 (ಭಾಗ-1) ದಿನಾಂಕ:12-02-2019

## -: ಸುತ್ತೋಲೆ :-

ವಿಷಯ:-ದಿನಾಂಕ:15.02.2019 ರಂದು "ಮತದಾರ ಸಾಕ್ಷರತ ಸಂಘ"ಗಳ ಸ್ಥಾಪನೆ ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕುರಿತು.

ಉಲ್ಲೇಖ: 1. No.491/ECI/LET/SVEEP-1/FL/ELC/2017 Dated 3rd November,2017

2. ದಿನಾಂಕ 07.02.2019 ರಂದು ರಾಜ್ಯ ಚುನಾವಣಾ ಆಯೋಗದ ವತಿಯಿಂದ ಏರ್ಪಡಿಸಿರುವ ವಿಡಿಯೋ ಕಾನ್ಫರೆನ್ಸ್ ಸಮಾಲೋಚನೆಯಂತೆ.

* * *

ಮುಂಬರುವ ಲೋಕಸಭಾ ಚುನಾವಣೆ-2019 ರ ಹಿನ್ನೆಲೆಯಲ್ಲಿ **"ಚುನಾವಣೆ ಮತ್ತು ಮತದಾನ ಪ್ರಕ್ರಿಯೆ"** ಕುರಿತಂತೆ ಮತದಾರರಲ್ಲಿ ವಿಶೇಷವಾಗಿ ರಾಜ್ಯದ ಭವಿಷ್ಯದ ಮತದಾರರು, ನೂತನ-ಯುವ ಮತದಾರರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖಿದನ್ವಯ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಪಾಲಿಟೆಕ್ನಿಕ್, ಐ.ಟಿ.ಐ. ಇನ್ನಿತರ ಡಿಪ್ಲೋಮ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ತಾಂತ್ರಿಕ ಮತ್ತು ವೈದ್ಯಕೀಯ ಹಾಗೂ ವೃತ್ತಿಪರ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ **"ಮತದಾರ ಸಾಕ್ಷರತಾ ಸಂಘಗಳು"** (Electoral literacy clubs) ಹಾಗೂ ಮತಗಟ್ಟೆ ಕೇಂದ್ರಗಳಲ್ಲಿ **"ಚುನಾವಣಾ ಜಾಗೃತಿ ಸಂಘ"**(Chunavana jagrutha clubs)ಗಳನ್ನು ಪ್ರಾರಂಭಿಸಲು ನಿರ್ದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ **ದಿನಾಂಕ15.02.2019** ಸೂಚಿತ ಮಾರ್ಗಸೂಚಿಗಳನ್ವಯ ಇಎಲ್‌ಸಿ ಹಾಗೂ ಸಿಎಲ್‌ಸಿಗಳನ್ನು ಪ್ರಾರಂಭಿಸಿ **"ಚುನಾವಣೆ ಮತದಾನದ ಪ್ರಕ್ರಿಯೆ"** ಸಂಬಂಧಿಸಿದಂತೆ ಕರಪತ್ರ, ಭಿತ್ತಿಪತ್ರ ಪ್ಲೇಕಾರ್ಡ್ಸ್, ಬ್ಯಾನರ್ ಇನ್ನಿತರ ಪ್ರಚಾರ ಸಾಮಗ್ರಿಗಳೊಂದಿಗೆ ಪ್ರಮುಖ ಸಾರ್ವಜನಿಕ ಸ್ಥಳಗಳು, ಗ್ರಾಮ/ ಪಟ್ಟಣ/ ನಗರದ ಪ್ರಮುಖ ಬೀದಿಗಳಲ್ಲಿ ಪ್ರಭಾತಪೇರಿಯೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ. ಈ ಕಾರ್ಯಕ್ರಮದ ಭಾಗವಾಗಿ ಆಂದೋಲನದ ಮಾದರಿಯಲ್ಲಿ 01.01.2019 ಕ್ಕೆ 18 ವರ್ಷ ತುಂಬಿದ ನೂತನ ಮತದಾರರನ್ನು ಗುರ್ತಿಸಿ, ಫಾರಂ 6 ಭರ್ತಿ ಮಾಡುವ ಮೂಲಕ ಅವರ ನೋಂದಣಿಯನ್ನು ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಉತ್ತಮ ರೆಸಲ್ಯೂಷನ್ ಇರುವ ಆಯ್ದ ಛಾಯ ಚಿತ್ರಗಳನ್ನು ಸ್ಕ್ಯಾನ್ ಮಾಡಿದ ಪ್ರಚಾರ ಸಾಮಗ್ರಿಗಳ ಪ್ರತಿಗಳೊಂದಿಗೆ ಸಂಕ್ಷಿಪ್ತ ವರದಿಯನ್ನು ಕೆಳಕಂಡ ವೆಬ್ ವಿಳಾಸದಲ್ಲಿ ತಿಳಿಸಿರುವ ನಿಗದಿತ ನಮೂನೆಯನ್ವಯ ದಿನಾಂಕ:18.02.2019 ರೊಳಗೆ ತಪ್ಪದೆ ceokarelc.cjc@gmai.com ಇ-ಮೇಲ್‌ಗೆ ಕಳುಹಿಸಿಕೊಡಲು ತಿಳಿಸಿದೆ ಹಾಗೂ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಕೋರಿರುವ ಮಾಹಿತಿಯನ್ನು/ದತ್ತಾಂಶವನ್ನು ಅಪ್‌ಲೋಡ್ ಮಾಡಲು ಈ ಮೂಲಕ ತಿಳಿಸಿದೆ.

(ಎ.ವಿ.ಸೂರ್ಯಸೇನ್)
ಜಂಟಿ ಮುಖ್ಯ ಚುನಾವಣಾಧಿಕಾರಿಗಳು
ಸಿ.ಆ.ಸು.ಇ.(ಚುನಾವಣೆಗಳು)

Scanned by CamScanner

ಪ್ರತಿಯನ್ನು ತುರ್ತು ಕ್ರಮಕ್ಕಾಗಿ:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು-560001
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.
4) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು-560013
5) ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಹಾಗು ಜಿಲ್ಲಾಧಿಕಾರಿಗಳು, ಕರ್ನಾಟಕ.
6) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ
7) ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು( ಆಡಳಿತ), ಉಪ ನಿರ್ದೇಶಕರು( ಅಭಿವೃದ್ಧಿ) ಮತ್ತು ಉಪ ನಿರ್ದೇಶಕರು( ಪಿ.ಯು) ಸಾರ್ವಜನಿಕ ಶಿಕ್ಷಣ ಇಲಾಖೆ.

Scanned by CamScanner